**ಸಾಕ್ಷಿಗೆ ದಿನಾಂಕ 19.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ.ವರೆಗೂ ವಿದ್ಯಾಭ್ಯಾಸ ಮಾಡಿದ್ದು, ನಾನು ವ್ಯವಸಾಯ ಮಾಡುತ್ತೇನೆ. ಆರೋಪಿಯು ನನ್ನ ಸಂಬಂಧಿಯಾಗಿದ್ದು, ಅವರ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ. ಆರೋಪಿಯು ಕೂಲಿ ಕೆಲಸ ಮಾಡುತ್ತಿದ್ದು, ಟ್ರ್ಯಾಕ್ಟರ್‌ನ್ನು ಸಹ ಓಡಿಸುತ್ತಾರೆ ಎಂದರೆ ಸರಿ. ಆರೋಪಿಗೆ ಅವರದ್ದೇ ಆದ ಸ್ವಂತ ಜಮೀನು ಇರುವುದಿಲ್ಲ ಎಂದರೆ ಸರಿ. ದಿ: 10.01.2023 ರಂದು ಆರೋಪಿಯು ನನ್ನ ಬಳಿ ಹಣವನ್ನು ಕೇಳಿರುತ್ತಾರೆ. ದಿ: 10.01.2023 ರ ಮೊದಲು ನನ್ನ ಬಳಿ ರೂ. 5 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಚೆಕ್ಕನ್ನು ಮಾತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ನ್ನು ಆರೋಪಿಯೇ ಬರೆದು ನೀಡಿರುತ್ತಾರೆ. ನಿಪಿ-1 ರಲ್ಲಿ ಎರಡು ರೀತಿಯ ಬರವಣಿಗೆ ಇದೆ ಎಂದರೆ ಗೊತ್ತಿಲ್ಲ. ನಿಪಿ-1 ರಲ್ಲಿ ಬರೆದಿರುವ ಬರವಣಿಗೆ ಹಾಗೂ ಪಿರ್ಯಾದಿಯಲ್ಲಿರುವ ಬರವಣಿಗೆ ಒಂದೇ ಎಂದರೆ ಸರಿಯಲ್ಲ. ರೂ. 5 ಲಕ್ಷ ಹಣವನ್ನು ನಾನು ಕುರಿಯನ್ನು ಮಾರಿ ಪಡೆದಿರುತ್ತೇನೆ. ಆರೋಪಿಯು ವಿದ್ಯಭ್ಯಾಸ ಮಾಡಿರುವುದಿಲ್ಲ ಹಾಗೂ ಅವರಿಗೆ ಚೆಕ್ಕನ್ನು ಬರೆಯುವಷ್ಟು ಜ್ಞಾನ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಜೊತೆ ವಿದ್ಯಾಭ್ಯಾಸ ಮಾಡಿರುತ್ತಾರೆ ಹಾಗೂ ಚೆಕ್ಕನ್ನು ಬರೆಯುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಸಂಬಂಧಿಯಾಗಿರುವ ಕಾರಣ ಚೆಕ್ಕನ್ನು ನಾನೇ ಬರೆದು, ತೆಗೆದುಕೊಂಡು ಹೋಗಿ ಬ್ಯಾಂಕಿಗೆ ನಗದೀಕರಣ ಮಾಡಲು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-5 ರಲ್ಲಿರುವ ಸಹಿ ಆರೋಪಿಯದ್ದು. ಹಣವನ್ನು ನೀಡುವ ಸಮಯದಲ್ಲಿ ಒಬ್ಬರು ಸಾಕ್ಷಿದಾರರು ಇದ್ದರು, ಅವರನ್ನು ನನ್ನ ಪರವಾಗಿ ಸಾಕ್ಷಿಯನ್ನಾಗಿ ಮಾಡಿಸುತ್ತೇನೆ. 3 ನೇ ವ್ಯಕ್ತಿಯು ವ್ಯವಹಾರದ ವೇಳೆ ಇದ್ದ ಬಗ್ಗೆ ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರೂ. 20,000/- ಕ್ಕೂ ಹೆಚ್ಚು ಹಣವನ್ನು ವ್ಯವಹಾರವನ್ನು ಮಾಡವಬೇದಾರೆ ಚೆಕ್ಕು ಅಥವಾ ಡಿ.ಡಿ. ಮೂಲಕ ಮಾಡಬೇಕೆಂದು ಕಾನೂನು ಇದೆ ಎಂದರೆ ನಾನು ಕುರಿ ಮಾರಿದ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ ಹಾಗೂ ಯಾವುದೇ ಆದಾಯ ತೆರಿಗೆಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಯು ಕೂಲಿ ಕೆಲಸ ಮಾಡುತ್ತಿದ್ದ ಕಾರಣ ಅವರಿಗೆ ರೂ. 5 ಲಕ್ಷಗಳನ್ನು ಸಾಲವನ್ನಾಗಿ ನೀಡಲು ಯಾವುದೇ ಆಧಾರ ಇರುವುದಿಲ್ಲ ಎಂದರೆ ಸಂಬಂಧಿಕರಾಗಿದ್ದ ಕಾರಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು 2 ತಿಂಗಳಲ್ಲಿ ಹಿಂದಿರುಗಿಸುತ್ತೇನೆ ಎಂದು ತಿಳಿಸಿರುತ್ತಾರೆ. ನನ್ನ ದೂರಿನಲ್ಲಿ 4 ತಿಂಗಳು ಎಂದು ನಮೂದು ಮಾಡಿ ಈಗ 2 ತಿಂಗಳಲ್ಲಿ ಹಿಂದಿರುಗಿಸುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು

ನನ್ನ ಬಳಿ ಯಾವುದೇ ಹಣವನ್ನು ಪಡೆಯದೇ ಇದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಬೇರೆ ವ್ಯಕ್ತಿಯು ಆಂಗ್ಲ ಭಾಷೆಯಲ್ಲಿ ಸಹಿ ಮಾಡಿ ನೋಟೀಸ್‌ನ್ನು ಸ್ವೀಕರಿಸಿರುತ್ತಾರೆ ಆರೋಪಿಯು ಸ್ವೀಕರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದ ಮೇಲೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ ಮತ್ತು ಸರಿ ಇದೆ.**

**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ದೊಡ್ಡಬಳ್ಳಾಪುರ.**